## ಶ್ರೀ ಶ್ರೀಪಾದರಾಜಗುರುಭ್ಯೋನಮಃ

### ಮಹಿಮೆ ಸಾಲದೇ ಇಷ್ಟೇ ಮಹಿಮೆ ಸಾಲದೆ

ರಾಗ : ತೋಡಿ ತಾಳ : ಆದಿ

ಮಹಿಮೆ ಸಾಲದೇ ಇಷ್ಟೇ ಮಹಿಮೆ ಸಾಲದೆ || ಪ ||

ಅಹಿಶಯನನ ಒಲುಮೆಯಿಂದ
ಮಹಿಯೊಳೆಮ್ಮ ಶ್ರೀ ಪಾದರಾಜರ || ಅ ||

ಮುತ್ತಿನಕವಚ ಮೇಲ್ಕುಲಾವಿ ನವ
ರತ್ನ ಕೆತ್ತಿದ ಕರ್ಣಕುಂಡಲ
ಕಸ್ತುರಿತಿಲಕ ಶ್ರೀ ಗಂಧಲೇಪನ
ವಿಸ್ತಾರದಿಂದ ಮೆರೆದು ಬರುವ || 1 ||

ವಿಪ್ರಹತ್ಯ ದೋಷ ಬರಲು
ಕ್ಷಿಪ್ರತ ಶಂಖೋದಕದಿ ಕಳೆಯೆ
ಅಪ್ರಬುದ್ಧರು ದೂಷಿಸೆ ಗೇರೆಣ್ಣೆ
ಕಪ್ಪುವಸನ ಹಸನ ಮಾಡಿದ || 2 ||

ಹರಿಗೆ ಸಮರ್ಪಿಸಿದ ನಾನಾ
ಪರಿಯ ಶಾಖಂಗಳನು ಭುಂಜಿಸೆ
ನರರು ನಗಲು ಶ್ರೀಶಕೃಷ್ಣನ
ಕರುಣದಿಂದ ಹಸಿಯ ಮಾಡಿದ || 3 ||

## ವಾದಿಗಜಮಸ್ತಕಾಂಕುಶ ಸುಜನಬುಧಗೇಯ

ರಾಗ : ನಾಟ                                   ತಾಳ : ಧ್ರುವ

ವಾದಿಗಜಮಸ್ತಕಾಂಕುಶ ಸುಜನಬುಧಗೇಯ
ಮೇದಿನೀಸುರವಂದ್ಯ ಶ್ರೀ ಪಾದರಾಯ          ॥ ಪ ॥
ಸಕಲಶಾಸ್ತ್ರಕಲಾಪ ಸನ್ಯಾಸಕುಲದೀಪ
ಸಕಲ ಸತ್ಯಸ್ಥಾಪ ಸುಜ್ಞಾನದೀಪ
ಪ್ರಕಟಪಾವನರೂಪ ಅರಿಕುಜನಮತಲೋಪ
ನಿಕಟವರ್ಜಿತಪಾಪ ಕೀರ್ತಿಪ್ರತಾಪ          ॥ 1 ॥
ಹರಿಪದಾಂಬುಜಭೃಂಗ ಪರಮತಾಹಿವಿಹಂಗ
ಪರಮಸುಗುಣಾಂತರಂಗ ಭವದುರಿತಭಂಗ
ಶರಣಕೀರ್ತಿತರಂಗ ಶತ್ರುತಿಮಿರಪತಂಗ
ಶರಣುಶುಭಚರಿತಾಂಗ ಷಟ್ಶಾಸ್ತ್ರಸಂಗ          ॥ 2 ॥
ಸಿರಿಕೃಷ್ಣ ದಿವ್ಯಪಾದಾಬ್ಜ ಚಿಂತಾಲೋಲ
ವರಹೇಮವರ್ಣಮುನಿಪತಿಯ ಸುಕುಮಾರ
ಗುರುತಿಲಕ ಶ್ರೀ ಪಾದರಾಯ ಅಮಿತೋದ್ಧಾರ
ಶರಣಜನಸುರಧೇನು ಭಕ್ತಮಂದಾರ          ॥ 3 ॥

## ನೆನೆದು ಬದುಕಿರೋ ಸತತ ನೆನೆದು ಬದುಕಿರೋ

ರಾಗ :ಪಂತುವರಾಳಿ                                   ತಾಳ : ರೂಪಕ

ನೆನೆದು ಬದುಕಿರೋ ಸತತ ನೆನೆದು ಬದುಕಿರೋ
ನೆನೆದು ಬದುಕಿ ಸುಜನರೆಲ್ಲ ಘನಗುಣಾಂಬುಧಿ ಶ್ರೀ ಪಾದರಾಯರ ॥ ಪ ॥
ಇತರ ಧ್ಯಾನವೆಲ್ಲವಳಿದು ಅತಿಶಯದಿ ವಿರಕ್ತಿ ಬಲಿದು

ಮತಿ ವಿಶೇಷವೆನಿಪ ಮಧ್ವಮತಾಂಬುನಿಧಿಗೆ ಪೂರ್ಣಚಂದ್ರನ II 1 II
ಅಮಿತಪುಣ್ಯ ಅಗ್ರಗಣ್ಯನ ವಿಮತಹರನ ವಿನಯಪರನ
ದ್ಯುಮಣಿತೇಜನ ದುರಿತ ದೂರನ ಶಮದಮಾದಿಗುಣಸಮುದ್ರನ II 2 II
ಹೀನಕುಮತಮಾನಭಂಗನ ಸೂನಶರನ ಗೆಲಿದ ಘನ್ನನ
ದಾನಕರ್ಣನ ದಯಾರ್ಣವನ ಜ್ಞಾನಪೂರಿತ ಶುಭಚರಿತನ II 3 II
ವಾದಿಕುಂಜರಪಂಚಮುಖನ ಸಾರುಸಜ್ಜನಕಲ್ಪವೃಕ್ಷನ
ವೇದಶಾಸ್ತ್ರಪುರಾಣದಲಿ ಆದಿಶೇಷಣ ಪೋಲ್ವಮುನಿಯ II 4 II
ವನಜನೇತ್ರನ ಕೃಷ್ಣ ಪ್ರಿಯನ ಕನಕವರ್ಣತೀರ್ಥರ ಸುತನ
ಜನಸಮೂಹಸನ್ನುತ ಪರಮವನಧಿಗಂಭೀರ ಶ್ರೀ ಪಾದರಾಯರ II 5 II

## ಶ್ರೀಪಾದರಾಯರ ದಿವ್ಯ ಶ್ರೀಪಾದವ ಭಜಿಸುವೆ

ರಾಗ : ಕಲ್ಯಾಣಿ ತಾಳ : ಆದಿ

ಶ್ರೀಪಾದರಾಯರ ದಿವ್ಯ ಶ್ರೀಪಾದವ ಭಜಿಸುವೆ II ಪ II
ವಾಗ್ವಜ್ರಗಳಿಂದ ಮಾಯಾವಾದಿಗಳೆಲ್ಲರ ಬಾಯ
ಬೀಗವನಿಕ್ಕಿ ಮುದ್ರಿಸಿದ ಬಿಂಕಗಳ ಬಿಡಿಸುವ II 1 II
ವ್ಯಾಸರಾಯರಿಗೆ ವಿದ್ಯಾಭ್ಯಾಸವ ಮಾಡಿಸುವ
ದಾಸರ ನಾಮಗಳಿಂದ ಲೇಸುಲೇಸೆಂದೆನಿಸಿಕೊಂಬ II 2 II
ಮಧ್ವಮತದಲ್ಲಿ ಪುಟ್ಟಿ ಮಾಯಾವಾದಿಗಳ ಕುಟ್ಟಿ
ಗೆದ್ದು ಮೆರೆದನು ದಿಟ್ಟ ಗುರುರಾಯ ಜಗಜಟ್ಟಿ II 3 II
ಸುವರ್ಣವರ್ಣತೀರ್ಥರ ಸುತ ಶ್ರೀ ಪಾದರಾಯರ
ಅವರ ನಾಮಗಳಿಂದ ಕಾವನಯ್ಯ ಕರುಣಾನಿಧಿ II 4 II
ವರದ ವೆಂಕಟೇಶನ್ನ ಒಲಿದು ಪೂಜಿಸುವನ
ಕರುಣದಿಂದ ಹಯವದನ ಸಲಹೋ ಯತಿರನ್ನನ II 5 II

## ಪರಮತ ಘನವನ ಪಾವಕನೆ ಶರಣು

ರಾಗ : ಉದಯ　　　　　　　　　ತಾಳ : ತ್ರಿಪುಟ

ಪರಮತ ಘನವನ ಪಾವಕನೆ ಶರಣು – ಭೂ

ಸುರಸುತ ಸಿರಿ ನಾರಾಯಣ ಯೋಗಿ　　　　　　II ಪ II

ಧರೆಯೊಳು ಮೂರೇಳು ಕುಮತರ ಭಾಷ್ಯವ

ಕಿರುಕು ಹಾವಿಗೆ ಯಂದದಿ ರಚಿಸೆ

ಚರಣದಿಂದಲಿ ತುಳಿದು ಶತ್ರುಖಳಾರಾ ಕರೆದು

ಮೊರೆಯಿಡುತಿವೆ ಶಾಸ್ತ್ರಸೆರೆಯ ಬಿಡಿಸಿರೆಂಬ　　　　　　II 1 II

ಬಿರಿದು ಬಿಂಕವ ನಡೆದಿರೆ ಸೆಂಘನಿನ್ನೊಡನೆ

ತರಹರಿಸಲರಿಯದೆ ಇರಲು ಆ ದುರಿತಾದ್ರಿ

ಮುರಿದು ಭಂಗಿತರಾಗಿ ಘನವಾಗ್ಬಂಧನದಿಂದ

ಶರಣ ಪೊಕ್ಕು ನಿನ್ನದಾಸರಾಹರಯ್ಯ　　　　　　II 2 II

ಹರಿಪ್ರೀತಿಗಾಗಿ ನಿರ್ಮಲ ಸುಕೃತಂಗಳ

ಧರಿಸಿದ ಕುಸುಮ ಪರಿಮಳಂಗಳ

ನರನೊಬ್ಬ ದೂಷಿಸೆ ಕೇಳಿ ಸರ್ವವನುಳುಹೆ

ಅರಕ್ಷ ಮದಿ ಅವನ ತನು ಬರಿಯ ರಕ್ಷಿಸಿದೆ　　　　　　II 3 II

ಸುರನಾಥಪುಕಂದು ಘನಪುಷ್ಪ ವಿಮಾನದಿ

ಸರಿವುತ್ತಲಿರೆ ರಘುನಾಥೇಂದ್ರರು

ವರವೃಂದಾವನ ಪ್ರದಕ್ಷಿಣೆಂಗೊಳೀಕ್ಷಿಸಿ

ಕರೆದು ಭಾಷಿಸಿ ಕಳುಹಿದಾಶ್ವರ್ಯ ಚರಿತ　　　　　　II 4 II

ಸರಸಿಜಾಕ್ಷನ ಧ್ಯಾನದೊಳಗೆ ವ್ಯಾಸಮುನಿಯ

ಉರಗ ಬಂಧಿಸಲು ಧ್ಯಾನದೊಳೀಕ್ಷಿಸಿ

ಮರುತವೇಗದಿ ಪೋಗಿ ಫಣೀಪನೊಡನೆ ಭಾಷಿಸಿ – ತೊ
ಡರ ಬಿಡಿಸಿದ ಅಹಿಪಾಶವ ಗುರುರಾಯ || 5 ||
ಸುರತರುವಿನಂದದಿ ಬೇಡಿದಿಷ್ಟಾರ್ಥವ
ಕರೆದಿತ್ತೆ ಈ ಬುಧ ಜನರಿಗೆಲ್ಲ
ನರನೊಬ್ಬ ದೂಷಿಸೆ ನೋಡಿ ಆ ಕ್ಷಣದಲ್ಲಿ
ರೆಕ್ಷಣಕವನತನುಬಿರಿಯೆ ರಕ್ಷಿಸಿದೆ || 6 ||
ಸಿರಿಕೃಷ್ಣ ಪದಕಂಜ ಭೃಂಗನೆಂದೆನಿಸುವ
ವರಹೇಮವರ್ಣತೀರ್ಥರ ಕುವರ
ಸುರನರೋರುಗರೊಳು ಪ್ರಖ್ಯಾತರೆನಿಸುವ
ಅರಿಶರಭ ಭೇರುಂಡ ನೆನಿಪ ಶ್ರೀ ಪಾದರಾಯ || 7 ||

## ಶ್ರೀಪಾದರಂ ಭಜಿಸಿರೋ

ರಾಗ : ಉದಯ
ಶ್ರೀಪಾದರಂ ಭಜಿಸಿರೋ || ಪ ||
ಶ್ರೀಪಾದರಾಜಾಬ್ಜ ಶ್ರೀಪಾದಕಾರಡಿಗ
ಳೋಪಾದಿ ಚರಿಸುವ ಧರಾಪಾವಕಾಸ್ಯರಿಗೆ
ತಾಪತ್ರಯಾದಿ ದುಃಖಾಪನೋದನವಹುದು ಶ್ರೀಪತಿಯು ಕೈಪಿಡಿವನು । ಅ।
ಅಬ್ಬೂರ ಶೇಷಗಿರಿಯಾಚಾರ್ಯನೆಂಬೋರ್ವ
ಸುಬ್ರಾಹ್ಮಣೋತ್ತಮನ ಜಾಯೆ ಗಿರಿನಾಮಕಳ
ಗರ್ಭಾಮೃತಾಬ್ಧಿಯಲಿ ವಿಧುಬಿಂಬದಂತೆ ಪ್ರಾದುರ್ಭವಿಸಿ ಮುದವೀಯುತಾ
ನಿರ್ಭರದಿ ಚೌಷಷ್ಠಿಕಲೆಗಳಿಂ ಶೋಭಿಸುತ
ಕರ್ಬುರಾಭಿಧಮುನಿಕರಾಬ್ಜೋತ್ಥನೆಂದೆನಿಸಿ
ಉರ್ಬಿಯೊಳು ಸೌಖ್ಯಪ್ರಾರಬ್ಧ ಭೋಗಿಸುವ

ಗುರುದುಗ್ದಾಬ್ಧಿ ಜೇಶಯೋಗೀ II 1 II
ಶ್ರೀ ಮದಾಚಾರ್ಯರ ಕರಕಮಲಸಂಜಾತರಹ
ತಾಮರಸನಾಭಾರ್ಯರಾಮಹಾಪೀಠೀಗೆಯ
ಸೋಮಪಸಮೂಹಾಭ್ರ ಸಾಮಜಾರೂಢ ನಿಸ್ಸೀಮ ಮಹಿಮಾವೇಷ್ಠಿತ
ಆ ಮಹಾಮಿಥ್ಯಾದ್ರಿಸ್ತೋಮ ಪಾಟನ ಪರೋ
ದ್ದಾಮ ವಾಗ್ವಜ್ರಕೃತ ಧೀಮತಾಂವರ ಸಾರ್ವಭೌಮ
ಸಾಳ್ವನೃಸಿಂಹನಾಮಯವ ಹರಿಸಿ ಸಿಂಹಾಸನವೇರಿಮೆರೆದಾ II 2 II
ಗಂಗೆಯನು ಸಾಕ್ಷಾನ್ನೃಸಿಂಗತೀರ್ಥಕೆ ಕರೆಸಿ
ರಂಗವಿಠಲನ ಭೀಮರಥಿಯಿಂದ ಹೊರದೆಗಿಸಿ
ನುಂಗಲೊದಗಿದ ಭುಜಗನೊಡನುಡಿಸಿ ನೃಪಗರಣ್ಯಾಂಗಣದಿ ಸೌಖ್ಯಪಡಿಸಿ
ಹಿಂಗದೆಲೆ ನಿತ್ಯ ಚೌಷಷ್ಠಿಶಾಖವ ನಡೆಸಿ
ಸಂಗೀತ ಕಾವ್ಯಕವಿಪುಂಗವೋತ್ತಮನೆನಿಸಿ
ಭಂಗಪಡುತಿಹರ ಪಾಪಂಗಳನು ಪರಿಹರಿಸಿ ಮಂಗಳಾತ್ಮಕನೆನಿಸಿದಾ II 3 II
ವ್ಯಾಸಮುನಿಪಗೆ ಶಾಸ್ತ್ರಾಭ್ಯಾಸಮಾಡಿಸಿ ಮಾತೃ
ಭಾಷೆಯಲಿ ಪರಮಾರ್ಥಗೋಸಂತತಿಯನೂತ
ನಾಶುಕವಿತೆಯೊಳುಭಯಭಾಷಾಪ್ರವೀಣನೆಂದಾಶಾಂತಕೀರ್ತಿ ಪಡಿದೂ
ಭಾಸುರಸುಕರ್ನಾಟದಾಸದೀಕ್ಷಾಪಗತ
ಮಾತ್ಸರ್ಯ ಬುಧರಿಗುಪದೇಶಿಸಿ ಮಧ್ವಾಗಮವ
ದೇಶದೇಶದಿ ಹಬ್ಬಿ ಹಸುರಾಗಿ ಫಲಿಸೆ ಸ್ವತ ಏವಮಾರ್ಗವ ತೋರಿದಾ II 4 II
ಶ್ರೀ ಪಾದರಾಜ ನಮೋ ಪಾಪಪಹಾರ ನಮೋ
ತಾಪಸೋತ್ತಂಸ ನಮೋ ವ್ಯಾಪಿತ ಸುಕೀರ್ತಿ ನಮೋ
ಸ್ವಾರ್ಲೋಕ್ಷಾನುಗತಗೋಪಾಲಕೃಷ್ಣಾಂಘ್ರಿಸ್ಥಾಪಿತ ಸಚೇತನಮಃ
ಭೂಪಾಲವಂದ್ಯ ನಮೋ ಕೋಪದಿರಹಿತ ನಮೋ

ರೂಪಾತಿರೇಕ ನಮೋ ಪ್ರಾಪ್ತ ಸುಖನಿವಹ ನಮೋ
ಪೃಷತ್ತುಂಗಮತಸ್ಥಾಪನಾಚಾರ್ಯ ದುರ್ಮಿಥ್ಯಾಪಮೃತ್ಯೋಪಮ ॥ 5 ॥
ನಿರುತ ಕರುಣಾಮೂರ್ತಿ ಹರಿದಾಸಕುಲವೃಷಭ
ಸರಸ ಸಜ್ಜನವಂದ್ಯ ನಿರ್ಧೂದುರಿತಕುಲ
ಪರಮಹಂಸ ಪರಾರ್ಥನಿವಿಷ್ಟ ಸುಚಿತ್ತ ಪರಿತ್ಯಕ್ತದುರ್ಮೋಹ ಧ್ರುವನಂಶವೂ
ಮರುತಮತಕ್ಷೀರಾಬ್ಧಿಶರಸುಧಾಕರಮೂರ್ತಿ
ವರಜ್ಞಾನ ವೈರಾಗ್ಯನಿರುಪಮಿತಭಕ್ತಿಯುತ
ಹರಿಪುರವಸೇರ್ದನು ಪರಾಭವ ಚತುರ್ದಶಿಯ ಜ್ಯೇಷ್ಠೆಂದುಪಕ್ಷದಲಿ ॥ 6 ॥
ಶ್ರೀ ಪಾದರಾಜರ ದಯಾಪ್ರಸಾದವೆ ಮುಕ್ತಿ ಸೋಪಾನವೆನಿಸಿ
ಭವತಾಪಗಳೆವುದು ಗುರು ಶ್ರೀಪ್ರಮೋದರ ಮತದಿ ವ್ಯಾಪಸಿದ
ಭಕ್ತಿಯಿಂದಪವರ್ಗ ಕೈಸಾರ್ವುದು ಶ್ರೀ ಪಾದರಾಜಸ್ತವಸಪುತರತ್ನಖ್ಯಸ
ನ್ನೊಪುರವ ಸಿರಿ ತಂದೆವೆಂಕಟೇಶವಿಠ್ಠಲ ಪರಾಪರೇಶನ
ಪಾದಕರ್ಪಿಸಿದೆ ಪಠಿಸಿ ಪರಿತೋಷಪಡಲಂದು ಬುಧರು ॥ 7 ॥

## ಶ್ರೀ ಪಾದರಾಜಗುರುವೆ ನತಸುರತರುವೆ

ರಾಗ : ಮಾಲಕಂಸ ತಾಳ: ಕೇರವ

ಶ್ರೀ ಪಾದರಾಜಗುರುವೆ ನತಸುರತರುವೆ ॥ ಪ ॥
ಶ್ರೀ ಪಾದರಾಜ ನಿನ್ನ ನಾ ಪೊಂದಿದೆನು ತ್ರಯ
ತಾಪಗಳೋಡಿಸಿ ನೀಪಾಲಿಸನುದಿನ ॥ ಅ. ಪ. ॥
ಪಂಡಿತಾಗ್ರಣಿ ಕರ್ಣಕುಂಡಲಮಕುಟಾಭರಣ
ಮಂಡಿತನಾಗಿ ಮಾರ್ತಾಂಡನಂತೆ ಪೊಳೆವ ॥ 1 ॥
ಪವನದೇವನ ಶಾಸ್ತ್ರಸುವಿಚಾರಭರಿತವಾಕ್
ಪವಿಯಾಖ್ಯಗ್ರಂಥಕೃತಕವಿ ಕುಲೋತ್ತಂಸ ಹಂಸ ॥ 2 ॥

ಮೃಷ್ಟಾನ್ನ ನಾನಾವಿಧಶಷ್ಠಿಶಾಕಂಗಳ
ನಿಷ್ಟಿಲಿ ಸದಾ ರಂಗವಿಠಲಗರ್ಪಿಸಿದ ॥ 3 ॥
ಇಳೆಯಸುರಗೆ  ಹತ್ಯ ಸಲೆಕರುಣದಿ ಶಂಖ
ಜಲ ಪ್ರೋಕ್ಷಿಸಿ ಕಳೆದು ಸಲಹಿದ ಸನ್ಮಹಿಮ ॥ 4 ॥
ತಂದೆ ಜರಿಯೆವನದಿ ನಿಂದು ಭಜಿಸಿ ಶ್ಯಾಮ
ಸುಂದರನೊಲಿಸಿ ಸ್ಥಿರಾನಂದಪದವಿ ಪಡೆದ ॥ 5 ॥

॥ ಶ್ರೀಪಾದರಾಜಗುರ್ವಂತರ್ಗತ ಶ್ರೀವಾದಿರಾಜಗುರ್ವಂತರ್ಗತ
ಶ್ರೀಮಧ್ವೇಶಾರ್ಪಣಮಸ್ತು॥

ಗಣಕೀಕರಣ: ಚಿ॥ಕೃಷ್ಣ